# ಮಕ್ಕಳಿಗಾಗಿ ಬೈಬಲ್

**ಅರ್ಪಿಸುವ**



# ದಾನಿಯೇಲನು ಮತ್ತು ಸಿಂಹದ ಗುಹೆ


ಬರಹಗಾರರು: Edward Hughes
ಚಿತ್ರಲೇಖಕರು: Jonathan Hay
ಪದ್ಮಾ ಸೈಲೇಸ್: Vinay Shirol
ಅಳವಡಿಸುವವರು: Mary-Anne S.



60ರ 34ನೇ ಕಥೆ

**www.M1914.org**

***Bible for Children,*** *PO Box 3, Winnipeg, MB R3C 2G1 Canada*



**ಅನುಮತಿ: ಈ ಕಥೆಯನ್ನು ಉಪಯೋಗಿಸುವದಕ್ಕೆ ಮತ್ತು ಮುದ್ರಣಹಾಕುವದಕ್ಕೆ ನಿಮಗೆ ಅನುಮತಿ ಇರುವದು. ಆದರೆ, ಇದನ್ನು ನೀವು ಯಾವ ಕಾರಣಕ್ಕಾಗಿಯೂ ಮಾರಾಟಮಾಡಬಾರದು.**


ಕನ್ನಡ

Kannada

ಬಾಬಿಲೋನಿಗೆ ದಾರ್ಯವೇಷನು ಹೊಸ ರಾಜನಾಗಿದ್ದನು. ಅವನು ಚುರುಕಾದವನಾಗಿದ್ದನು. ಆತನು ತನ್ನ ರಾಜ್ಯವನ್ನು ಆಳಲು ಸಹಾಯ ಮಾಡುವುದಕ್ಕಾಗಿ ಶ್ರೇಷ್ಠರಾದ ನೂರಿಪ್ಪತ್ತು ಮಂದಿಯನ್ನು ಆರಿಸಿಕೊಂಡನು ನಂತರ ಮೂವರು ಮುಖ್ಯಾಧಿಕಾರಿಗಳನ್ನು ಆರಿಸಿಕೊಂಡನು. ಆ ಮೂವರಲ್ಲಿ ದಾನಿಯೇಲನು ಒಬ್ಬನಾಗಿದ್ದನು.



1

ರಾಜನಾದ ದಾರ್ಯವೇರ್ಷನು ದಾನಿಯೇಲನನ್ನು ಬಹಳವಾಗಿ ಗೌರವಿಸಿದನು. ಅವನನ್ನು ಪೂರ್ಣ ರಾಜ್ಯದ ಮೇಲೆ ಅಧಿಕಾರಿಯನ್ನಾಗಿ ನೇಮಿಸಲು ಉದ್ದೇಶಿಸಿದನು.



2

ಬೇರೆ ನಾಯಕರು ಅಸೂಯೆಗೊಂಡರು. ಅವರು ರಾಜನೊಂದಿಗೆ ದಾನಿಯೇಲನ ಮೇಲೆ ತಪ್ಪು ಹೋರಿಸಿ ತೊಂದರೆಯಲ್ಲಿ ಸಿಕ್ಕಿಸುವುದಕ್ಕಾಗಿ ಸಂದರ್ಭವನ್ನು ಹುಡುಕುತ್ತಿದ್ದರು.



3

ಅವರು ಎಷ್ಟೇ ಪ್ರಯತ್ನಿಸಿದರು ಈ ನಾಯಕರು ದಾನಿಯೇಲನಲ್ಲಿ ಯಾವ ಕೆಡುಕನ್ನು ಕಾಣಲಿಲ್ಲ. ದಾನಿಯೇಲನು ತಾನು ಮಾಡಿದ ಎಲದ್ಲರಲ್ಲಿ ರಾಜನಿಗೆ ನಂಬಿಗಸ್ತನಾಗಿದ್ದನು, ಅಷ್ಟೇ ಅಲ್ಲದೆ ಚುರುಕುಳ್ಳವನು ಮತ್ತು ಜಾಗರೂಕನಾಗಿದ್ದನು. ಅವನು ತೆಗೆದುಕೊಂಡ ಎಲ್ಲಾ ಕೆಲಸವನ್ನು ಉತ್ತಮವಾಗಿ ಮಾಡಿ ಮುಗಿಸಿದನು.



4

ಅಸೊಯೆಗೊಂಡ ನಾಯಕರಿಗೆ ದಾನೀಯೆಲನಲ್ಲಿ ಒಂದೇ ಒಂದು ವಿಷಯದಲ್ಲಿ ತಪ್ಪು ಹೊರಿಸಲು ಗೂತ್ತಿತ್ತು. ಯಾಕೆಂದರೆ ಇಸ್ರಾಯೆಲ್ಯರ ದೇವರನ್ನು ಆರಾಧಿಸುವ ದಾನೀಯೆಲನನ್ನು ತಡೆಯುವುದಕ್ಕೆ ಈ ಭೂಮಿಯಲ್ಲಿ ಯಾರಿಂದಲು ತಡೇಯಲು ಸಾದ್ಯವಿಲ್ಲ ಎಂಬುದು ಅವರಿಗೆ ತಿಳಿದಿತ್ತು.



5




ದಾನೀಯೆಲನ ಶತ್ರುಗಳು ಹೊಸ ಸಂಚನ್ನು ರೂಪಿಸಿದರು. ಅವರು ರಾಜನು ರುಜು ಹಾಕಲಿಕ್ಕೆ ಹೊಸ ಶಾಸನವನ್ನು ಶಾಸನವನ್ನು ರೂಪಿಸಿದರು. ಆ ಶಾಶನವು ರಾಜನಾದ ದಾರ್ಯಾವೆಷನಿಗೆ ಎಲ್ಲರೂ ಅಡ್ಡಬಿಳ್ಳಬೇಕು ಮತ್ತು ಯಾರಾರು ಪೂಜಿಸಿ ಅಡ್ಡಬಿಳುವುದಿಲ್ಲವೊ ಅವರನ್ನು ಸಿಂಹದ ಗುಹೆಯಲ್ಲಿ ಹಾಕಲಾಗುವುದೆಂದು ಬರೆಯಲ್ಪಟ್ಟಿತ್ತು.

6

ರಾಜನಾದ ದಾರ್ಯಾವೆಷನು ಹೊಸ ಶಾಸನಕ್ಕೆ ರುಜುಹಾಕಿದನು.



7

ದಾನಿಯೇಲನಿಗೆ ಹೊಸ ಶಾಸನ ಯಾವ ವ್ಯತ್ಯಾಸವನ್ನು ಮಾಡಲಿಲ್ಲ. ಅವನು ಯಾವಾಗಲು ಮಾಡುತ್ತಿದ್ದುದನ್ನೇ ಮಾಡಿದನು. ಅವನು ತನ್ನ ತೆರೆದ ಕಿಡಕಿಯ ಬಳಿ ಮೋನಕಾಲೂರಿ ದಿನಕ್ಕೆ ಮೂರಾವರ್ತಿ ಪರಲೋಕದ ದೇವರಿಗೆ ಪ್ರಾರ್ಥಿಸಿದನು.





8



ಅಸೂಯೆಗೊಂಡ ನಾಯಕರು ಈ ವಿಷಯವನ್ನು ತಿಳಿಸಲು ರಾಜನ ಬಳಿಗೆ ಓಡಿಬಂದರು. ರಾಜನಾದ ದಾರ್ಯಾವೆಷನಿಗೆ ದಾನಿಯೇಲನನ್ನು ಬಂದಿಸುವುದನ್ನು ಬಿಡದೆ ಬೇರೆ ಯಾವ ಮಾರ್ಗವು ಆತನ ಬಳಿ ಇರಲಿಲ್ಲ.

9



ಶಾಶನಕ್ಕೆ ವಿಧೇಯರಾಗಲೇ ಬೇಕು, ದಾನಿಯೇಲನು ಮರಣಿಸಲೆ ಬೇಕು. ರಾಜನು ಕಠಿಣವಾಗಿ ಪ್ರಯತ್ನಿಸಿದನು ಆದರೆ ಶಾಶನವನ್ನು ಬದಲಿಸಲು ಯಾವ ಮಾರ್ಗವು ಕಾಣಿಸಲಿಲ್ಲ.

10

ದಾನಿಯೇಲನನ್ನು ಸಿಂಹಗಳ ಗುಹೆಯಲ್ಲಿ ಹಾಕಲು ತೀರ್ಮ ಕೊಡಲ್ಪಟ್ಟಿತು. ದಾನಿಯೇಲನನ್ನು ಹಸಿದಿರುವ ಸಿಂಹಗಳ ಗುಹೆಯಲ್ಲಿ ಹಾಕಲ್ಪಡುವುದಕ್ಕಿಂತ ಮುಂಚೆ ರಾಜನಾದ ದಾರ್ಯಾವೆಷನು "ನೀನು ನಿತ್ಯವು ಭಜಿಸುವ ದೇವರು ನಿನ್ನನ್ನು ಬಿಡಿಸುವನು" ಎಂದು ಹೇಳಿದನು.



11

ರಾಜನು ಆ ರಾತ್ರಿ ನಿದ್ರೆ ಮಾಡಲಿಲ್ಲ. ಮಾರನೆ ದಿನ ರಾಜನು ಸಿಂಹಗಳ ಗವಿಯ ಬಳಿಗೆ ತ್ವರೆಯಾಗಿ ಓಡಿದನು.



12



ರಾಜನಾದ ದಾರ್ಯಾವೆಷನು "ದಾನಿಯೇಲನೆ, ಜೀವಸ್ವರೂಪನಾದ ದೇವರ ಸೇವಕನೆ, ನೀನು ನಿತ್ಯವು ಭಜಿಸುವ ದೇವರು ನಿನ್ನನ್ನು ಬಿಡಿಸಲು ಶಕ್ತನಾಗಿದ್ದಾನಾ?" ಎಂದು ಜೋರಾಗಿ ಕೂಗಿದನು. ರಾಜನು ಉತ್ತರವನ್ನು ನೀರಿಕ್ಷಿಸಿರಲಿಲ್ಲ, ಆದರೆ ದಾನಿಯೇಲನು ಪ್ರತ್ಯುತ್ತರ ಕೊಟ್ಟನು.

13

ದಾನಿಯೇಲನು "ರಾಜನೆ, ನನ್ನ ದೇವರು ತನ್ನ ದೂತನ್ನು ಕಳುಹಿಸಿ ಸಿಂಹಗಳ ಬಾಯಿಯನ್ನು ಬಂದಿಸಿದನು. ಅವುಗಳಿಂದ ಯಾವ ಹಾನಿಯು ಆಗಲಿಲ್ಲ ಮತ್ತು ನಿನಗೆ ವಿರುದ್ದವಾಗಿ ನಾನು ಯಾವ ದ್ರೋಹವನ್ನು ಮಾಡಿಲ್ಲ" ಕೂಗಿದನು.



14

ರಾಜನಾದ ದಾರ್ಯಾವೆಷನು ಸಂತೋಷಗೊಂಡನು. ದಾನಿಯೇಲನನ್ನು ಸಿಂಹಗಳ ಗುಹೆಯಿಂದ ಮೇಲಕ್ಕೆತ್ತಲು ಆಜ್ಞಾಪಿಸಿದನು.



15

ದಾನಿಯೇಲನನ್ನು ದೇವರು ಬಿಡಿಸಿದ್ದಾನೆಂದು ರಾಜನು ತಿಳಿದುಕೊಂಡನು ಮತ್ತು ದಾನಿಯೇಲನ ವೈರಿಗಳು ದೇವರ ವೈರಿಗಳಾಗಿದ್ದರು.



16

ರಾಜನು ಒಂದು ಆಜ್ಞೆಯನ್ನು ಹೊರಡಿಸಿದನು "ದಾನಿಯೇಲನ ಮೇಲೆ ದೂರುಹೊರಿಸಿದವರನ್ನು ಹಾಗೂ ಕೆಟ್ಟ ಶಾಸನಕ್ಕ ಸಹಿ ಹಾಕಲು ಉಪಾಯ ಮಾಡಿದವರನ್ನು ಸಿಂಹಗಳ ಗುಹೆಯಲ್ಲಿ ಹಾಕಲ್ಪಡಬೇಕು" ಎಂಬುದಾಗಿ. ಅವರನ್ನು ಹಾಕಲು ಸಿಂಹಗಳು ಅವರನ್ನು ತಿಂದುಬಿಟ್ಟವು.



17

ರಾಜನಾದ ದಾರ್ಯಾವೆಷನು, ಪರಲೋಕದ ದೇವರು ನಂಬಿಗಸ್ತನಾದ ದಾನಿಯೇಲನನ್ನು ಕಾಪಾಡಿದನು ಎಂಬ ವಿಷಯವನ್ನು ಲೋಕವೆಲ್ಲ ತಿಳಿದುಕೊಳ್ಳಬೇಕೆಂಬುದಾಗಿ ಇಚ್ಚೆಸಿದನು. ಪ್ರತಿಯೊಬ್ಬರು ಜೀವಸ್ವರೂಪನಾದ ದೇವರನ್ನು ಆರಾಧಿಸಬೇಕು ಎಂಬುದಾಗಿ ಆಜ್ಞಾಪಿಸಿ ಪತ್ರವನ್ನು ಬರೆಯಿಸಿದನು. ದಾನಿಯೆಲನನ್ನು ಗೌರವಿಸಿ ಮೊದಲಿನಂತೆ ನಾಯಕತ್ವದಲ್ಲಿರಿಸಿದನು.



18

ದಾನಿಯೇಲನು ಮತ್ತು ಸಿಂಹದ ಗುಹೆ

ದೇವರ ವಾಕ್ಯವಾದ ಬೈಬಲ್‌ನಿಂದ ಆರಿಸಿದ ಕಥೆ

ಸಿಕ್ಕುವ ಭಾಗ

ದಾನಿಯೇಲ **6**

**"ನಿನ್ನ ವಾಕ್ಯವಿವರಣೆಯಿಂದ ಜ್ಞಾನೋದಯವಾಗುವದು."**
**ಕೀರ್ತನೆ 119:130**

ನಾವು ಕೆಟ್ಟದಾದ ಕಾರ್ಯಗಳನ್ನು ಮಾಡಿದ್ದೇವೆಂದು ದೇವರು ತಿಳಿದಿರುವನು. ಈ ಕೆಟ್ಟ ಕಾರ್ಯಗಳನ್ನು ಆತನು ಪಾಪವೆಂದು ಕರೆಯುತ್ತಾನೆ. ಪಾಪದ ಶಿಕ್ಷೆಯು ಮರಣವಾಗಿದೆ.

ದೇವರು ನಮ್ಮನ್ನು ತುಂಬಾ ಪ್ರೀತಿಸುವದರಿಂದ ತನ್ನ ಮಗನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿ ನಮ್ಮ ಪಾಪದ ಆ ಶಿಕ್ಷೆಯನ್ನು ಆತನು ತನ್ನ ಮೇಲೆ ಹೊತ್ತು ಕೊಂಡು ಶಿಲುಬೆಯ ಮೇಲೆ ಪ್ರಾಣಕೊಡುವಂತೆ ಮಾಡಿದನು. ಆತನು ಸತ್ತವರೊಳಗಿಂದ ಎದ್ದು ಪರಲೋಕಕ್ಕೆ ಏರಿಹೋಗಿದ್ದಾನೆ. ಯೇಸುಕ್ರಿಸ್ತನ ಮೂಲಕ ದೇವರು ನಮ್ಮ ಪಾಪಗಳನ್ನು ಕ್ಷಮಿಸುತ್ತಾನೆ.

ನೀನು ನಿನ್ನ ಪಾಪಗಳಿಂದ ದೇವರ ಕಡೆಗೆ ತಿರುಗುವದಾದರೆ ಆತನಿಗೆ ಹೀಗೆ ಹೇಳು; ಪ್ರೀತಿಯುಳ್ಳ ದೇವರೇ, ಯೇಸುಕ್ರಿಸ್ತನು ನನ್ನ ಪಾಪಕ್ಕಾಗಿ ಸತ್ತು, ತಿರುಗಿ ಎದ್ದು ಬಂದು ಜೀವಿಸುತ್ತಿದ್ದಾನೆ ಎಂದು ನಂಬುತ್ತೇನೆ. ನೀನು ನನ್ನ ಹೃದಯದೊಳಗೆ ಬಂದು ನನ್ನ ಪಾಪಗಳನ್ನು ಕ್ಷಮಿಸು. ಈ ಮೂಲಕ ನಾನು ಹೊಸ ಜೀವಿತವನ್ನು ಪಡೆದುಕೊಂಡು ನಿನ್ನೊಂದಿಗೆ ಸದಾ ಜೀವಿಸುವೆನು. ನಿನ್ನ ಮಗನಾಗಿ ನಿನಗಾಗಿ ಜೀವಿಸಲು ನನಗೆ ಸಹಾಯ ಮಾಡು. ಆಮೆನ್. ಯೋಹಾನ **3:16**

ನೀನು ಪ್ರತಿ ದಿನವೂ ಬೈಬಲ್ ಓದು ಮತ್ತು ಪ್ರಾರ್ಥನೆಯಲ್ಲಿ ದೇವರೊಂದಿಗೆ ಮಾತಾಡು.